


ಪತಿ, ಪತ್ನಿಯ ಕಪಾಳಕ್ಕೆ ಜೋರಾಗಿ ಹೊಡೆದು 'ಅತ್ಯಂತ ಪ್ರೀತಿ ಇರೋರನ್ನೇ ಕಣೆ ಹೊಡೆಯೋದು' ಎಂದ. ಪತ್ನಿ ಗಂಡನಿಗೆ ಮುಷ್ಟಿಯಿಂದ ನಾಲ್ಕು ಗುದ್ದಿ, ಕಪಾಳಕ್ಕೆ ಮೂರು ಬಾರಿಸಿ, ಲಟ್ಟಣಿಗೆಯಿಂದ ಎರಡು ಬಿಟ್ಟು, ಜಾಡಿಸಿ ಒದ್ದು ಹೇಳಿದಳು, 'ನನಗೇನು ನಿಮ್ಮ ಮೇಲೆ ಪ್ರೀತಿ ಕಡಿಮೆ ಆಗಿದ್ಯಾ? ನಿಮಗಿಂತ ಜಾಸ್ತಿ ಇದೆ' ಅಂತ.

***

ಗುಂಡನಿಗೆ ವಾರವಿಡೀ, ಹುಡುಗಿ ಒಬ್ಬಳು ಚಪ್ಪಲಿಯಲ್ಲಿ ಹೊಡೆಯುವ ಕನಸು ಬೀಳುತ್ತಿತ್ತು. ಹೆದರಿಕೊಂಡ ಆತ, ಅಗತ್ಯ ಕೆಲಸ ಇದ್ದರೂ ಬ್ಯಾಂಕ್‌ಗೆ ಹೋಗಲೇ ಇಲ್ಲ. ಏಕೆಂದರೆ... ಬ್ಯಾಂಕ್‌ನ ಮುಂದೆ ಹೀಗೆ ಬರೆದಿತ್ತು. 'ನಿಮ್ಮ ಕನಸನ್ನು ನಾವು ನನಸು ಮಾಡುತ್ತೇವೆ'!

***

ತಿಮ್ಮ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ. ಅಲ್ಲಿದ್ದ ಗಗನ ಸಖಿಯನ್ನು ಕಂಡು, 'ನಿಮ್ಮ ಮುಖ ಸೇಮ್ ನನ್ನ ಹೆಂಡತಿಯ ಮುಖದಂತೆಯೇ ಇದೆ' ಎಂದ. ಅದನ್ನು ಕೇಳಿ ಕೆರಳಿದ ಅವಳು ಸಿಟ್ಟಿನಿಂದ ತಿಮ್ಮನಿಗೆ ಜೋರಾಗಿ ಕಪಾಳ ಮೋಕ್ಷ ಮಾಡಿದಳು. ತಕ್ಷಣವೇ ಪ್ರತಿಕ್ರಿಯಿಸಿದ ತಿಮ್ಮ, 'ಬರಿ ಮುಖ ಅಷ್ಟೇ ಅಲ್ಲ ಸ್ವಭಾವ ಕೂಡ ಸೇಮ್ ಇದೆ' ಎಂದ!

***

ಕಾಲೇಜಿನ ಮೊದಲ ದಿನ ಒಂದು ಸುಂದರ ಹುಡುಗಿ, ಗುಂಡಣ್ಣನ ಹತ್ತಿರ ಬಂದು ಹಾಯ್ ಹೇಳಿದಳು. ಮಾತು ಮುಂದುವರೆಸಿ, 'ನಾನು ಮೊದಲ ವರ್ಷದ ಬಿ.ಎ ಅಡಮಿಶನ್‌ಗೆ ಬಂದಿದ್ದೇನೆ. ಮತ್ತೆ ನೀವು ಅದಕ್ಕೇನಾ ಬಂದಿರೋದು' ಎಂದಳು. ಅದಕ್ಕೆ ಗುಂಡಣ್ಣ, 'ಹುಚ್ಚು ಹುಡುಗಿ ಅಮ್ಮ ಮಾತ್ರ ಸಂತೂರ್ ಸೋಪ್ ಹಚ್ಚಲ್ಲ ಅಪ್ಪ ಕೂಡ ಹಚ್ತಾರೆ. ನಾನು ನನ್ನ ಮಗನಿಗೆ ಅಡಮಿಶನ್‌ಗೆ ಬಂದಿರುವೆ' ಎಂದ!

**ಹೆಂಡತಿ:** ರೀ... ನಾನು ಮೂರು ಗಂಟೆಗಳ ಕಾಲ ಹೊರಗೆ ಹೋಗ್ತಿದ್ದೀನಿ. ನಿಮಗೇನಾದರೂ ಬೇಕಾ?
**ಗಂಡ:** ನನಗಷ್ಟೇ ಸಾಕು ಕಣೇ!

***

ಗುಂಡಣ್ಣ ಫ್ಲಿಪ್‌ಕಾರ್ಟ್‌ನವರಿಗೆ ಫೋನ್ ಮಾಡಿ, 'ಹಲೋ ಇದು ಫ್ಲಿಪ್‌ಕಾರ್ಟ್ ಆಫೀಸಾ' ಎಂದು ಪ್ರಶ್ನಿಸಿದ.
**ರಿಸೆಪ್ಷನಿಸ್ಟ್:** ಹೌದು ಸರ್ ಇದು ಫ್ಲಿಪ್‌ಕಾರ್ಟ್ ಆಫೀಸ್. ಏನಾಗಬೇಕಿತ್ತು ನಮ್ಮಿಂದ?
**ಗುಂಡಣ್ಣ:** ಏನಿಲ್ಲ ಇವತ್ತು ನನ್ನ ಹೆಂಡತಿಗೆ ಡೆಲಿವರಿ ಆಯ್ತು. ಮುದ್ದಾದ ಗಂಡು ಮಗು.
**ರಿಸೆಪ್ಷನಿಸ್ಟ್:** ಅಭಿನಂದನೆಗಳು ಸರ್, ಏನಾದರೂ ಬೇಬಿ ಪ್ರಾಡಕ್ಟ್ ಬೇಕಿತ್ತಾ?
**ಗುಂಡಣ್ಣ:** ಇಲ್ಲ ನನ್ನ ಬ್ಯಾಂಕ್ ಖಾತೆ ನಂಬರ್ ಕೊಡ್ತೀನಿ ಅದಕ್ಕೆ ದುಡ್ಡು ಹಾಕಿ.
**ರಿಸೆಪ್ಷನಿಸ್ಟ್:** ಕ್ಷಮಿಸಿ ಸರ್ ನಾವ್ಯಾಕೆ ನಿಮಗೆ ದುಡ್ಡು ಹಾಕಬೇಕು? ನಿಮ್ಮ ಮಾತು ಅರ್ಥವಾಗುತ್ತಿಲ್ಲ. ಕನ್‌ಫ್ಯೂಸ್ ಮಾಡಿಕೊಂಡು ನಮಗೆ ಫೋನ್ ಮಾಡಿದ್ದೀರ ಅಂತ ಅನಿಸುತ್ತೆ ನೋಡಿ.
**ಗುಂಡಣ್ಣ:** ಕನ್‌ಫ್ಯೂಸ್ ಏನೂ ಇಲ್ಲ. 'ಕ್ಯಾಶ್ ಆನ್ ಡೆಲಿವರಿ' ಅಂತ ಬೋರ್ಡ್ ಹಾಕಿದ್ದೀರಲ್ಲ. ಅದಕ್ಕೆ ಫೋನ್ ಮಾಡ್ದೆ.

***

**ಗ್ರಾಹಕ:** ಸ್ನಾನದ ಸೋಪು ಎಷ್ಟು ಸಾರ್?
**ಅಂಗಡಿಯವ:** ಮೂವತ್ತು ರೂಪಾಯಿ.
ಗ್ರಾಹಕ: ಕಡಿಮೆ ಆಗಲ್ವಾ ಸರ್?
**ಅಂಗಡಿಯವ:** ಸ್ನಾನ ಮಾಡ್ತಾ ಇದ್ರೆ ಕಡಿಮೆ ಆಗ್ತಾ ಇರುತ್ತೆ ಸರ್!

***

**ವಿದ್ಯಾರ್ಥಿ:** ಹಲೊ ಸರ್... ಹ್ಯಾಪಿ ಟೀಚರ್ಸ್ ಡೇ!
**ಟ್ಯೂಷನ್ ಮೇಷ್ಟ್ರು:** ಥ್ಯಾಂಕ್ಸ್ ಕಣಪ್ಪ.
**ವಿದ್ಯಾರ್ಥಿ:** ಸರ್ ನಿಮ್ಮ ಒಂದು ಫೋಟೊ ಕಳಿಸಿ.
**ಟ್ಯೂಷನ್ ಮೇಷ್ಟ್ರು:** ಯಾಕಪ್ಪ?
**ವಿದ್ಯಾರ್ಥಿ:** ಸರ್ ಸ್ಟೇಟಸ್ ಹಾಕೋದಕ್ಕೆ.
**ಟ್ಯೂಷನ್ ಮೇಷ್ಟ್ರು:** ಬೇಡ ಕಣಪ್ಪ ನೀನು ನನ್ನ ವಿದ್ಯಾರ್ಥಿ ಅಂತ ಗೊತ್ತಾದರೆ ಯಾರೂ ನನ್ನ ಹತ್ತಿರ ಟ್ಯೂಶನ್‌ಗೆ ಬರಲ್ಲ.

***

**ಕಂಡಕ್ಟರ್:** ನಿನ್ನೆ ರಾತ್ರಿ ನೀವು ಜಾಸ್ತಿ ಕುಡಿದ ಹಾಗಿತ್ತು.
**ಕಲ್ಲೇಶಿ:** ನಿಮಗೆ ಹೇಗೆ ಗೊತ್ತಾಯಿತು?
**ಕಂಡಕ್ಟರ್:** ನೀವು ಆ ಹುಡುಗಿಗೆ ಸೀಟ್ ಬಿಟ್ಟು ಕೊಟ್ಟಿರಲ್ಲ ಆವಾಗ ಗೊತ್ತಾಯಿತು.
**ಕಲ್ಲೇಶಿ:** ಹುಡುಗಿಗೆ ಸೀಟು ಬಿಟ್ಟುಕೊಡುವುದಕ್ಕೂ ನಾನು ಜಾಸ್ತಿ ಕುಡಿದಿರುವುದಕ್ಕೂ ಏನು ಸಂಬಂಧ? ಆ ಕಾರಣಕ್ಕೆ ನಾನು ಜಾಸ್ತಿ ಕುಡಿದಿದ್ದೆ ಅಂತ ಹೇಗೆ ಗೊತ್ತಾಗುತ್ತೆ?
**ಕಂಡಕ್ಟರ್:** ನೀವು ಸೀಟ್ ಬಿಟ್ಟು ಕೊಟ್ಟಾಗ ಬಸ್ ಪೂರ್ತಿ ಖಾಲಿ ಇತ್ತು ಸರ್!

***

**ಹೆಂಡತಿ:** ರೀ... ನನಗೆ ದೆವ್ವ ಹಿಡಿದರೆ ನೀವು ಏನು ಮಾಡ್ತಿರಾ?
**ಗಂಡ:** ಹಂಗೆಲ್ಲ ನಿಮ್ಮ ಅಕ್ಕ–ತಂಗಿ ಮಧ್ಯೆ ಜಗಳ ಆದರೆ ನಾನು ಮಧ್ಯ ಬರೋದಿಲ್ಲ ಕಣೇ!

***

**ಮಹಿಳೆ:** ವಾವ್ ನೀವು ತುಂಬಾ ಚೆನ್ನಾಗಿ ಫೇಷಿಯಲ್ ಮಾಡ್ತೀರ. ತುಂಬ ವರ್ಷದ ಅನುಭವ ಇರುವ ಹಾಗಿದೆ ಅಲ್ವಾ?
**ಬ್ಯುಟೀಶಿಯನ್ ಹುಡುಗಿ:** ಅಯ್ಯೊ ನಾನು ಇವತ್ತೆ ಈ ಕೆಲಸಕ್ಕೆ ಸೇರಿದ್ದೇನೆ ಮೇಡಂ ಇದಕ್ಕೂ ಮೊದಲು ಮುಸುರೆ ಪಾತ್ರೆ ತಿಕ್ಕುತ್ತಿದ್ದ ಅನುಭವ ಇತ್ತು. ಅದನ್ನೇ ಇಲ್ಲೂ ಕೊಂಚ ಬದಲಾಯಿಸಿ ಪ್ರಯತ್ನಿಸಿದೆ!

***

**ಗಂಡ:** ನೀನು ಹೀಗೆ ದಿನಾ ಅದನ್ನು ತನ್ನಿ... ಇದನ್ನು ತನ್ನಿ... ಅಂತ ಕಿರಿಕಿರಿ ಮಾಡುತ್ತಿದ್ರೆ, ನಾನು ಹೋಗಿ ಹೊಳೆಗೆ ಹಾರುತ್ತೇನೆ.
**ಹೆಂಡತಿ:** ಹೊಳೆಯಿಂದ ಮೇಲೆ ಬರುವಾಗ ಮೀನು ತನ್ನಿ!

***

**ತಿಮ್ಮ:** ಮಿಸ್ ವರ್ಲ್ಡ್ ಆಗಬೇಕಾದರೆ ಏನ್ ಮಾಡ್ಬೇಕು?
**ಸುಬ್ಬಿ:** ಮೈಮೇಲೆ ಬಟ್ಟೆ ಮಿಸ್ ಆಗಿರಬೇಕು.

***

**ಬಂಟಿ:** ಕೊರೊನಾ ಹೇಗೆ ಬರುತ್ತೆ?
**ಬಬ್ಲಿ:** ಟೆಸ್ಟ್ ಮಾಡಿಸುವುದರಿಂದ.

***

**ಕಲ್ಲೇಶಿ:** ಏನಂತಾ ಮದುವೆ ಮಾಡಿಸಿದಯ್ಯಾ? ಮದುವೆಯಾದ ಮಾರನೇ ದಿನವೇ ನನ್ನ ಸೊಸೆ ವಾಂತಿ ಮಾಡಿದ್ಲು.
**ಬ್ರೋಕರ್:** ಮೊದಲೇ ಹೇಳಿದ್ನಲ್ಲಾ ಸ್ವಾಮಿ. ಹುಡುಗಿಗೆ ಈಗಾಗಲೇ 21 ವರ್ಷ. 3 ತಿಂಗಳು ಅಂತ!

***

**ಹೆಂಡತಿ:** ರಿ... ನೀವು ನನ್ ಪಾಲಿಗೆ ಒಂಥರಾ ಎರಡು ಸಾವಿರ ನೋಟು ಇದ್ದಂಗೆ!
**ಗಂಡ:** (ಖುಷಿಯಿಂದ) ಏನೇ ಸಮಾಚಾರ ನನ್ನ ಅಷ್ಟು ದೊಡ್ಡ ನೋಟಿಗೆ ಹೋಲಿಸುತ್ತಿದ್ದೀಯ?
**ಹೆಂಡತಿ:** ಅಂದ್ರೆ ಚೇಂಜೂ ಸಿಗಲ್ಲ... ಬಿಸಾಕಕ್ಕೂ ಆಗಲ್ಲ ಅಂತ.

–ಶರದ ಕುಲಕರ್ಣಿ, ಬೀದರ್